ವರ್ಷ (ಏಪ್ರಿಲ್–ಡಿಸೆಂಬರ್)	ಆದಾಯ (ಕೋಟಿ ರೂ.ಗಳಲ್ಲಿ)	ಶೇಕಡಾವಾರು
1990–91	311.01	–
1991–92	358.96	15.42
1992–93	360–94	0.55

3. ಅ. ಹರಾಜು ಕ್ರಮವನ್ನು ವ್ಯವಸ್ಥಿತಗೊಳಿಸುವುದರ ಮೂಲಕ ಸಾರಾಯಿ ಕಿಸ್ತಿನಿಂದ ಹೆಚ್ಚು ರಾಜಸ್ವವನ್ನು ನಿರೀಕ್ಷಿಸಲಾಗಿದೆ.

ಆ) ಇಲಾಖೆಯ ಜಾರಿ ವಿಭಾಗವನ್ನು ಬಲಪಡಿಸುವುದರ ಮೂಲಕ ಹಾಗೂ ಕಳ್ಳಭಟ್ಟಿ ಕೇಂದ್ರಗಳ ಮೇಲೆ ಪರಿಣಾಮಕಾರಿಯಾಗಿ ಧಾಳಿ ಮಾಡುವುದರ ಮೂಲಕ ಸಾರಾಯಿ ಮತ್ತು ವಿದೇಶಿ ಮದ್ಯದ ಮಾರಾಟದಲ್ಲಿನ ಸೋರುವಿಕೆಯನ್ನು ತಡೆಗಟ್ಟಿ, ರಾಜಸ್ವದಲ್ಲಿ ಹೆಚ್ಚಳವನ್ನು ನಿರೀಕ್ಷಿಸಲಾಗಿದೆ.

ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತ್ತು ನೇಸರಿಗಿ ಕೆ.ಎಸ್.ಆರ್.ಟಿ.ಸಿ. ಬಸ್‌ಸ್ಟ್ಯಾಂಡ್‌ದಲ್ಲಿಯ ಮೂತ್ರಾಲಯ ಮತ್ತು ಕಕ್ಕಸುಗಳ ಆಧುನೀಕರಣ.

226 (848) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಳಗಾವಿ ಜಿಲ್ಲೆ ಬೈಲಹೊಂಗಲ ಮತ್ತು ನೇಸರಗಿ ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟ್ಯಾಂಡ್‌ದಲ್ಲಿಯ ಮೂತ್ರಾಲಯ ಮತ್ತು ಕಕ್ಕಸುಗಳು ಬಹಳ ವರ್ಷಗಳ ಹಿಂದೆ ಕಟ್ಟಿಸಿದ್ದು ಅವುಗಳನ್ನು ನವೀಕರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ;

ಆ) ಈ ಸ್ಥಳಗಳಲ್ಲಿರುವ ಮೂತ್ರಾಲಯ ಮತ್ತು ಕಕ್ಕಸುಗಳನ್ನು ದುರಸ್ಥಿಗೊಳಿಸದೆ ಇರುವುದರಿಂದ ಪ್ರಯಾಣಿಕರಿಗೆ ಮೂತ್ರಾಲಯ ಮತ್ತು ಕಕ್ಕಸುಗಳನ್ನು ಉಪಯೋಗ ಮಾಡಲು ತೊಂದರೆಯಾಗುತ್ತಿರುವುದು ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಸಾರ್ವಜನಿಕರ ಆರೋಗ್ಯಕ್ಕೆ ಹಾನಿಯುಂಟಾಗುತ್ತಿರುವುದರಿಂದ ಇವುಗಳನ್ನು ದುರಸ್ತಿ ಮಾಡಲು ಸರ್ಕಾರದವರು ಕ್ರಮ ತೆಗೆದುಕೊಳ್ಳುವರೇ ಹಾಗಿದ್ದಲ್ಲಿ ದುರಸ್ತಿಗೊಳಿಸುವುದು ಯಾವಾಗ ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ) ಹೌದು

ಆ) ಹೌದು

ಇ) ಬೈಲಹೊಂಗಲ ಮತ್ತು ನೇಸರಗಿ ಬಸ್ ಸ್ಟ್ಯಾಂಡ್‌ಗಳಲ್ಲಿ ಮೂತ್ರಾಲಯ ಮತ್ತು ಕಕ್ಕಸುಗಳನ್ನು ನವೀಕರಣ ಮಾಡಲು ಆದ್ಯತೆಯ ಮೇಲೆ ಈಗಾಗಲೇ ಸೂಕ್ತ ಕ್ರಮವನ್ನು ಜರುಗಿಸಲಾಗಿದೆ.

ರಾಜ್ಯದಲ್ಲಿ ಖಾಲಿ ಇರುವ ದೈಹಿಕ ಶಿಕ್ಷಕರ ಹುದ್ದೆಗಳ ಸಂಖ್ಯೆ

227 (850) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಯುವಜನ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಖಾಲಿ ಇರುವ ದೈಹಿಕ ಶಿಕ್ಷಕರ ಹುದ್ದೆಗಳೆಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ಮತ್ತು ಶಾಲಾವಾರು ವಿವರ ನೀಡುವುದು)

ಆ) ಸದರಿ ಹುದ್ದೆಗಳನ್ನು ತುಂಬಲು ಸರ್ಕಾರವು ಕೈಗೊಂಡ ಕ್ರಮಗಳೇನು;

ಇ) ಪ್ರತಿಯೊಂದು ಕನ್ನಡ ಶಾಲೆಗಳಲ್ಲಿ ದೈಹಿಕ ಶಿಕ್ಷಕರನ್ನು ನೇಮಿಸಲು ಸರ್ಕಾರದವರು ಯೋಚಿಸಿರುವರೇ ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ರಾಜ್ಯ ಸಚಿವರು):–

ಅ) ಪ್ರಾಥಮಿಕ ಶಾಲೆಗಳಲ್ಲಿ 1035

ಜಿಲ್ಲಾವಾರು ಮಾಹಿತಿಯನ್ನು ತಾಲ್ಲೂಕುವಾರು ಹಾಗೂ ಶಾಲಾವಾರು ಮಾಹಿತಿಗಳನ್ನು ನಂತರ ಒದಗಿಸಲಾಗುವುದು.

ಪ್ರೌಢ ಶಾಲೆಗಳಲ್ಲಿ:

ಗ್ರೇಡ್ – 1 ದೈಹಿಕ ಶಿಕ್ಷಕರು	– 85
ಗ್ರೇಡ್ – 2 ದೈಹಿಕ ಶಿಕ್ಷಕರು	– 30
ಒಟ್ಟು	– 115

ಜಿಲ್ಲಾವಾರು ಮಾಹಿತಿಯನ್ನು ತಾಲ್ಲೂಕುವಾರು ಹಾಗೂ ಶಾಲಾವಾರು ಮಾಹಿತಿಗಳನ್ನು ನಂತರ ಒದಗಿಸಲಾಗುವುದು.

ಆ) ಪ್ರಾಥಮಿಕ ಶಾಲೆಗಳು:

1035 ಹುದ್ದೆಗಳ ಪೈಕಿ ಈಗಾಗಲೇ 79 ದೈಹಿಕ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ. ಇನ್ನುಳಿದ 956 ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ವಿಶೇಷ ನೇಮಕಾತಿ ನಿಯಮಾವಳಿಗಳು ರೂಪಿತವಾಗಿದ್ದು ಈ ಹುದ್ದೆಗಳನ್ನು ಭರ್ತಿ ಮಾಡಲು ಶೀಘ್ರದಲ್ಲಿಯೇ ಕ್ರಮ ತೆಗೆದುಕೊಳ್ಳಲಾಗುವುದು.

ಪ್ರೌಢಶಾಲೆಗಳು:

ಖಾಲಿ ಇರುವ 115 ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಪ್ರಾಥಮಿಕ: 1 ರಿಂದ 7 ತರಗತಿಗಳಿದ್ದು ಹಾಗೂ 7 ಸಾಮಾನ್ಯ ಶಿಕ್ಷಕರು ಇರುವಂತಹ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಒಂದು ಸಾಮಾನ್ಯ ಶಿಕ್ಷಕರ ಹುದ್ದೆಯನ್ನು ಒಂದು ದೈಹಿಕ ಶಿಕ್ಷಕ ಗ್ರೇಡ್ – 2 ಹುದ್ದೆಯನ್ನಾಗಿ ಪರಿವರ್ತಿಸಿದ್ದು ಆದರಂತೆ ಭರ್ತಿ ಮಾಡಲಾಗುತ್ತಿದೆ.

ಪ್ರೌಢಶಾಲೆ: ಎಲ್ಲಾ ಸರ್ಕಾರಿ ಪ್ರೌಢ ಶಾಲೆಗಳಿಗೆ ದೈಹಿಕ ಶಿಕ್ಷಕರ ಹುದ್ದೆಯನ್ನು ಮಂಜೂರು ಮಾಡಲಾಗುತ್ತಿದೆ ಮತ್ತು ನೇಮಕಾತಿ ನಿಯಮದಂತೆ ಹುದ್ದೆಗಳನ್ನು ತುಂಬಲಾಗುತ್ತಿದೆ.

ಶ್ರೀ ಟಿ.ಆರ್. ಸತೀಶಚಂದ್ರ ಆಯೋಗದ ವರದಿ ಅನುಷ್ಠಾನ

225 (849) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ):-

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?